


ಚಿತ್ರ: ಬಿ.ಕೆ. ಸೋಮಶೇಖರ, ಬೆಂಗಳೂರು

ಬಹಳ ವರ್ಷಗಳ ಹಿಂದೆ ನಡೆದಂತಹ ಒಂದು ಘಟನೆ. ಒಬ್ಬ ಕುದುರೆ ಸವಾರನು ದಾರಿಯಲ್ಲಿ ಹೋಗುತ್ತಿದ್ದ. ಕೆಲವು ಸೈನಿಕರು ಒಂದು ಭಾರವಾದ ಮರದ ದಿಮ್ಮಿಯನ್ನು ಸಾಗಿಸುವ ಪ್ರಯತ್ನದಲ್ಲಿ ವಿಫಲರಾಗಿದ್ದರು. ಸೈನಿಕರು ಮಾಡುತ್ತಿದ್ದ ಕೆಲಸವನ್ನು ಒಬ್ಬ ಸೈನ್ಯದ ಅಧಿಕಾರಿಯು ಎತ್ತರದಲ್ಲಿ ನಿಂತು, ಅಹಂಕಾರದಿಂದ ಉಸ್ತುವಾರಿ ಮಾಡುತ್ತಿದ್ದುದನ್ನು ಕುದುರೆ ಸವಾರನು ಕಂಡು ಅಧಿಕಾರಿಯ ಹತ್ತಿರ ಬಂದು "ಅವರಿಗೇಕೆ ನೀನು ಸಹಾಯ ಮಾಡುತ್ತಿಲ್ಲ?" ಎಂದು ಕೇಳಿದನು. ಅದಕ್ಕೆ ಆ ಅಧಿಕಾರಿಯು "ನಾನೊಬ್ಬ ಸೈನ್ಯದ ಅಧಿಕಾರಿ. ನನ್ನ ಕೆಲಸ ಕೇವಲ ಆಜ್ಞೆಯನ್ನು ಕೊಡುವುದು ಮಾತ್ರ." ಎಂದು ಹೇಳಿದನು. ಇದನ್ನು ಕೇಳಿದ ಕುದುರೆ ಸವಾರನು ಮರದ ದಿಮ್ಮಿಯನ್ನು ಸಾಗಿಸುವ ಕೆಲಸದಲ್ಲಿ ತಾನೇ ಸೈನಿಕರಿಗೆ ಸಹಾಯವನ್ನು ಮಾಡಿದನು. ಈ ಸವಾರನ ಸಹಾಯದಿಂದ ಸೈನಿಕರು ತಮ್ಮ ಕೆಲಸದಲ್ಲಿ ಸಫಲರಾದರು. ನಂತರ ಸವಾರನು ಅಧಿಕಾರಿಯ ಬಳಿ ತೆರಳಿ, "ಮುಂದೆಂದಾದರೂ ನಿನ್ನ ಸೈನಿಕರಿಗೆ ಸಹಾಯ ಬೇಕಾಗಿದ್ದಲ್ಲಿ ನಿನ್ನ ಪ್ರಧಾನ ಸೇನಾಧಿಪತಿಗೆ, ಸೈನಿಕರಿಗೆ ಸಹಾಯ ಮಾಡುವಂತೆ ಆಜ್ಞೆಯನ್ನು ನೀಡು" ಎಂದು ಹೇಳಿ ಹೊರಟುಹೋದನು. ಅನಂತರ ಅಧಿಕಾರಿಗೆ ಮತ್ತು ಸೈನಿಕರಿಗೆ ತಿಳಿಯಿತು ತಮಗೆ ಸಹಾಯ ಮಾಡಿದ ವ್ಯಕ್ತಿ ಬೇರಾರೂ ಅಲ್ಲದೆ ಅಮೆರಿಕ ದೇಶದ ಅಧ್ಯಕ್ಷನಾದ ಜಾರ್ಜ್ ವಾಷಿಂಗ್‌ಟನ್ ಎಂದು.



**ನೀತಿ : ಈ ದೃಷ್ಟಾಂತವು ಸಂಘಟನೆಯಲ್ಲಿ ಇರುವ ಶಕ್ತಿಯನ್ನೂ ಹಾಗೂ ಉನ್ನತ ಸ್ಥಾನದಲ್ಲಿದ್ದರೂ ಇರಬೇಕಾದ ವಿನಯವನ್ನೂ ನಮಗೆ ಕಲಿಸಿಕೊಡುತ್ತದೆ.**

✪